**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಪಿ. ಸುಜಾ ಕುಶಾಲಪ್ಪ ಇವರು ಶೂನ್ಯವೇಳೆಯಲ್ಲಿ 'ಕೊಡಗು ಜಿಲ್ಲೆಯ ರಾಜಾಸೀಟ್ ಸನ್ಸೆಟ್ ಮತ್ತು ಮಾಂದಲಪಟ್ಟಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಕುರಿತು' ಪ್ರಸ್ತಾಪಿಸಿರುವ ಬಗ್ಗೆ.</u>**

**ಪ್ರಶ್ನೆ:**

ದಿನಾಂಕ:03.12.2023ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "ಸೌಲಭ್ಯಗಳಿಗೆ ಕಾದಿವೆ ಪ್ರವಾಸಿ ತಾಣಗಳು" ಎಂಬ ಶೀರ್ಷಿಕೆಯಡಿಯಲ್ಲಿ ಕೊಡಗು ಜಿಲ್ಲೆಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ಅಗತ್ಯವಿರುವ ಸೌಲಭ್ಯಗಳ ಕುರಿತು ವರದಿಯಾಗಿತ್ತು.

ಕೊಡಗು ಪ್ರವಾಸೋದ್ಯಮದ ಪ್ರಮುಖ ಆಕರ್ಷಣೆಯೇ ಪ್ರಕೃತಿ ತಾಣಗಳು. ಆದರೆ ಅವುಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಿ ಪ್ರವಾಸಿ ಆಕರ್ಷಣೆಯಾಗಿಸಬೇಕಾದ ಅಗತ್ಯವಿದೆ. ಮಡಿಕೇರಿ ರಾಜಾಸೀಟ್ ಸನ್ಸೆಟ್ ವೀಕ್ಷಣೆಗೆ ಹೇಳಿ ಮಾಡಿಸಿದ ಸ್ಥಳವಾದರೆ, ಮಾಂದಲಪಟ್ಟಿಯಿಂದ ಕಣ್ಣಾಯಿಸಿದಷ್ಟು ದೂರಕ್ಕೆ ಹಸಿರ ಸಿರಿಯ ಬೆಟ್ಟ ಗುಡ್ಡಗಳನ್ನು ಕಣ್ತುಂಬಿಸಿಕೊಳ್ಳಬಹುದು. ಕೊಡಗಿನಲ್ಲಿ ಇಂತಹ ಹಲವಾರು ಸ್ಥಳಗಳಿವೆಯಾದರೂ ಸದ್ಯಕ್ಕೆ ಹೆಚ್ಚಿನ ಪ್ರವಾಸಿಗರು ಭೇಟಿ ನೀಡುವ ಸುಂದರ ತಾಣಗಳಿವು. ರಾಜಾಸೀಟನ್ನು ಇತ್ತೀಚೆಗಷ್ಟೇ ಅಭಿವೃದ್ಧಿ ಪಡಿಸಲಾಗಿದೆಯಾದರೂ ಇನ್ನೂ ಪ್ರವಾಸಿಗರಿಗಾಗಿ ಹಲವು ಆಕರ್ಷಣೆಗಳನ್ನು ಸೃಷ್ಟಿಸಲು ಸಾಧ್ಯವಿದೆ. ಹಿಂದೆ ಉದ್ಯಾನವನವಷ್ಟೇ ಆಗಿದ್ದ ರಾಜಾಸೀಟ್ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಅಭಿವೃದ್ಧಿ ಹೊಂದಿದ ಪ್ರವಾಸಿ ತಾಣವಾಗಿದೆ.

ಇನ್ನು ಮಾಂದಲಪಟ್ಟಿ ಅದ್ಭುತ ತಾಣವೇ ಆದರೂ ಅಲ್ಲಿ ಹೋಗುವುದೇ ದೊಡ್ಡ ಸಾಹಸ, ಪ್ರವಾಸಿಗರಿಗೆ ಸುಲಭವಾಗಿ ಹೋಗಿ ನೋಡುವಂತಾದರೆ ಇನ್ನಷ್ಟು ಪ್ರವಾಸಿಗರು ಕೊಡಗಿನತ್ತ ಆಕರ್ಷಿತರಾಗುವುದರಲ್ಲಿ ಅನುಮಾನವಿಲ್ಲ. ಜಿಲ್ಲೆಗೆ ಬರುವ ಪ್ರತಿಯೊಬ್ಬ ಪ್ರವಾಸಿಗರೂ ನೋಡಲೇ ಬೇಕಾದ ಅದ್ಭುತ ತಾಣ. ಆದರೆ ಎಲ್ಲರೂ ಮಾಂದಲಪಟ್ಟಿಗೆ ಹೋಗುವುದು ಸಾಧ್ಯವಾಗುವುದಿಲ್ಲ. ಕಾರಣ ಮಾಂದಲಪಟ್ಟಿಗೆ ರಸ್ತೆ ಸಂಪರ್ಕ ಸರಿಯಿರುವುದಿಲ್ಲ. ಸ್ವಂತ ವಾಹನವಿದ್ದರೂ ಹೋಗಲಾರದ ಪರಿಸ್ಥಿತಿ, ಇಲ್ಲಿ ಜೀಪ್ ಗಳಲ್ಲೇ ತೆರಳಬೇಕಿದ್ದು, ಕೆಲವು ಜೀಪ್ ಚಾಲಕರು ಹೆಚ್ಚಿನ ಹಣಕ್ಕೆ ಬೇಡಿಕೆ ಇಡುತ್ತಾರೆಂಬ ಆರೋಪವಿದೆ.

ಆದ್ದರಿಂದ, ಕೊಡಗು ಜಿಲ್ಲೆಯ ಈ ಎರಡು ಪ್ರವಾಸಿ ತಾಣಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸುವಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಉತ್ತರ:**

ಪ್ರವಾಸೋದ್ಯಮ ಇಲಾಖೆಯಿಂದ ಕೊಡಗು ಜಿಲ್ಲೆಯಲ್ಲಿ ರೂ.2406.09 ಲಕ್ಷಗಳ ಅಂದಾಜು ವೆಚ್ಚದಲ್ಲಿ 13 ಕಾಮಗಾರಿಗಳನ್ನು ಕೈಗೊಂಡಿದ್ದು, ಸದರಿ ಕಾಮಗಾರಿಗಳಿಗೆ ಇಲ್ಲಿಯವರೆಗೆ ರೂ.2029.20 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. ಉಳಿದ ಅನುದಾನವನ್ನು ಕಾಮಗಾರಿಗಳ ಪ್ರಗತಿ ಆಧಾರಿಸಿ ಬಿಡುಗಡೆಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಕೊಡಗು ಜಿಲ್ಲೆಯ ರಾಜಾಸೀಟ್ ಸನ್ಸೆಟ್ ಮತ್ತು ಮಾಂದಲಪಟ್ಟಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ರಾಜಾಸೀಟ್ ಪ್ರದೇಶದಲ್ಲಿ Hardscape work, Softscape work, Softscape irrigation, Electrification ಮುಂತಾದ ಅಭಿವೃದ್ಧಿ ಕಾಮಗಾರಿಗಳನ್ನು ರೂ.455.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು 2017-18ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದ್ದು, ಸದರಿ ಕಾಮಗಾರಿಗೆ ಈವರೆಗೆ ರೂ.371.25 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ.

2. ಮಡಿಕೇರಿಯ ರಾಜಾಸೀಟಿಗೆ ತೆರಳುವ ರಸ್ತೆಗೆ ಪಾತ್ ವೇ, ರೈಲಿಂಗ್ಸ್ ನಿರ್ಮಾಣ ಕಾಮಗಾರಿಯನ್ನು ರೂ.45.19 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು 2019-20ರಲ್ಲಿ ಮಂಜೂರಾತಿ ನೀಡಲಾಗಿದ್ದು, ಸದರಿ ಕಾಮಗಾರಿಗೆ ಈವರೆಗೆ ರೂ.28.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ.

..2..

3. ಮಾಂದಲಪಟ್ಟಿಯಲ್ಲಿ ಸಿಸಿ ರಸ್ತೆ ಮೆಟ್ಟಿಲು ಮತ್ತು ರೈಲಿಂಗ್ಸ್ ಅಳವಡಿಸುವ ಕಾಮಗಾರಿ(ಕಿ.ಮೀ 0.00 ರಿಂದ 0.940)ಯನ್ನು ರೂ.199.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು 2019-20ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದ್ದು, ಈವರೆಗೆ ಸದರಿ ಕಾಮಗಾರಿಗೆ ರೂ.149.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪೂರ್ಣಗೊಂಡಿದೆ.

ಸಂಖ್ಯೆ. ಟಿಓಆರ್ 259 ಟಿಡಿವಿ 2023

(ಹೆಚ್.ಕೆ.ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

ಅನುಬಂಧ

## ಪ್ರವಾಸೋದ್ಯಮ ಇಲಾಖೆಯಿಂದ ಕೊಡಗು ಜಿಲ್ಲೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಬಾಕಿ | 2023-24ನೇ ಸಾಲಿಗೆ ಕಾಯ್ದಿರಿಸಿರುವ ಅನುದಾನ | ಬಾಕಿ | ಷರಾ |
|---|---|---|---|---|---|---|---|---|---|
| | **ಮಡಿಕೇರಿ ತಾಲ್ಲೂಕು** | | | | | | | | |
| 1 | ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಸೆಂಟರ್ ನಿರ್ಮಾಣ(ವಾಚ್ ಟವರ್ ಕಮ್ ವಾಟರ್ ಟ್ಯಾಂಕ್, ಬಯಲು ರಂಗಮಂದಿರ , ಅಡಿಗೆಮನೆ, ಅಂಗಡಿ ಮಳಿಗೆ, ದೊಡ್ಡ ಹಾಲ್, ಲೈಬ್ರರಿ ಕೊಠಡಿ, ಪಾರ್ಕಿಂಗ್ ಡಿಸ್ಪ್ಲೇ ಏರಿಯಾ ಇತ್ಯಾದಿ ಸೌಲಭ್ಯಗಳ ಅಭಿವೃದ್ಧಿ) | 2008-09 ಬಂಡವಾಳ ವೆಚ್ಚಗಳು | 330.45 | ಲೋ.ಇ | 330.45 | 0.00 | 0.00 | 0.00 | ಪೂರ್ಣಗೊಂಡಿದೆ |
| 2 | ಮಡಿಕೇರಿಯ ರಾಜಾಸೀಟ್ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆ | 2014-15 ಬಂಡವಾಳ ವೆಚ್ಚಗಳು | 455.00 | ಲೋ.ಇ | 371.25 | 83.75 | 83.75 | 0.00 | ಪೂರ್ಣಗೊಂಡಿದೆ |
| 3 | ಕೊಡಗು ಜಿಲ್ಲೆಯ ಕೆಂಪುರಾಶಿ ಮೊಟ್ಟೆಯಿಂದ ಮಂಟಕಲ್ ಶಾಲೆವರೆಗೆ 2.00 ಕಿ.ಮೀ ರಸ್ತೆ ಅಭಿವೃದ್ಧಿ (ತಲಕಾವೇರಿ ಬದಿ ಸಂಪರ್ಕ ರಸ್ತೆ) (20 ಪ್ರವಾಸಿ ತಾಣಗಳ ಅಭಿವೃದ್ಧಿ ಕೂಡು ರಸ್ತೆ ಕಾಮಗಾರಿ) | 2017-18 ಬಂಡವಾಳ ವೆಚ್ಚಗಳು | 300.00 | ಲೋ.ಇ | 225.00 | 75.00 | 75.00 | 0.00 | ಪೂರ್ಣಗೊಂಡಿದೆ |

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಬಾಕಿ | 2023-24ನೇ ಸಾಲಿಗೆ ಕಾಯ್ದಿರಿಸಿರುವ ಅನುದಾನ | ಬಾಕಿ | ಷರಾ |
|---|---|---|---|---|---|---|---|---|---|
| 4 | ಮಡಿಕೇರಿಯಲ್ಲಿರುವ ಶ್ರೀ ಓಂಕಾರೇಶ್ವರ ದೇವಸ್ಥಾನ ಬಳಿ ಶೌಚಾಲಯ ಬಟ್ಟೆ ಬದಲಿಸುವ ಕೊಠಡಿ ನಿರ್ಮಾಣ | 2018-19 ಬಂಡವಾಳ ವೆಚ್ಚಗಳು | 36.60 | ಕೆಆರ್ ಐಡಿಎಲ್ | 36.00 | 0.60 | 0.60 | 0.00 | ಕಾಮಗಾರಿ 90% ಪೂರ್ಣಗೊಂಡಿದೆ ಎಂದು |
| 5 | ಮಡಿಕೇರಿ ತಾಲ್ಲೂಕಿನ ನಾಲ್ಕುನಾಡು ಅರಮನೆಗೆ ಸಂಪರ್ಕ ರಸ್ತೆ ಅಭಿವೃದ್ಧಿ (ಸಿಸಿರಸ್ತೆ) | 2018-19 ಬಂಡವಾಳ ವೆಚ್ಚಗಳು | 300.00 | ಲೋ.ಇ | 300.00 | 0.00 | 0.00 | 0.00 | ಪೂರ್ಣಗೊಂಡಿದೆ |
| 6 | ಮಡಿಕೇರಿಯ ಶ್ರೀ ಓಂಕಾರೇಶ್ವರ ದೇವಸ್ಥಾನದ ಬಳಿ 100 ಮೀಟರ್ ಸಿ.ಸಿ. ರಸ್ತೆ ನಿರ್ಮಾಣ ಮತ್ತು ಪಾರ್ಕಿಂಗ್ ಲಾಟ್ ಅಭಿವೃದ್ಧಿ. | 2019-20 | 40.80 | ಕೆ.ಆರ್.ಐ.ಡಿ.ಎಲ್. | 20.00 | 20.80 | 20.80 | 0.00 | ಪ್ರಗತಿ ಯಲ್ಲಿದೆ |
| 7 | ಮಡಿಕೇರಿಯ ರಾಜಾಸೀಟಿಗೆ ತೆರಳುವ ರಸ್ತೆಗೆ ಪಾತ್‌ವೇ, ರೈಲಿಂಗ್ಸ್ ನಿರ್ಮಾಣ ಕಾಮಗಾರಿ. | 2019-20 | 45.19 | ಲೋಕೋಪಯೋಗಿ ಇಲಾಖೆ | 28.00 | 17.19 | 17.19 | 0.00 | ಪೂರ್ಣಗೊಂಡಿದೆ |
| 8 | ಕೊಡಗು ಜಿಲ್ಲೆಯ ಮಾಂದಲಪಟ್ಟಿಯಲ್ಲಿ ಸಿ.ಸಿ. ರಸ್ತೆ, ಮೆಟ್ಟಿಲು ಮತ್ತು ರೈಲಿಂಗ್ಸ್ ಅಳವಡಿಸುವ ಕಾಮಗಾರಿ (ಕಿ.ಮೀ. 0.00 ರಿಂದ 0.940) | 2019-20 | 199.00 | ಕೆ.ಆರ್.ಐ.ಡಿ.ಎಲ್ | 149.00 | 50.00 | 50.00 | 0.00 | ಪೂರ್ಣಗೊಂಡಿದೆ |

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಬಾಕಿ | 2023-24ನೇ ಸಾಲಿಗೆ ಕಾಯ್ದಿರಿಸಿರುವ ಅನುದಾನ | ಬಾಕಿ | ಷರಾ |
|---|---|---|---|---|---|---|---|---|---|
| 9 | ಕೊಡಗು ಜಿಲ್ಲೆಯ ಅಬ್ಬಿ ಫಾಲ್ಸ್ ಪ್ರದೇಶದಲ್ಲಿ 300 ಮೀ. ಸಿ.ಸಿ. ರಸ್ತೆ, ಪಾರ್ಕಿಂಗ್ ಸೌಲಭ್ಯ ಹಾಗೂ ಮಳೆನೀರು ಚರಂಡಿ ನಿರ್ಮಾಣ | 2019-20 | 174.13 | ಕೆ.ಆರ್. ಐ.ಡಿ.ಎಲ್ | 130.00 | 44.13 | 44.13 | 0.00 | ಪೂರ್ಣಗೊಂಡಿದೆ |
| | **ಸೋಮವಾರಪೇಟೆ** | | | | | | | | |
| 10 | ಸೋಮವಾರಪೇಟೆ ತಾಲ್ಲೂಕು ಮಲ್ಲಳ್ಳಿ ಜಲಪಾತ ಪ್ರದೇಶದಲ್ಲಿ ಬಾಕಿ ಇರುವ ಮೆಟ್ಟಿಲುಗಳ ನಿರ್ಮಾಣ, ರೈಲಿಂಗ್ಸ್, ಪಾರ್ಕಿಂಗ್ ಮಳಿಗೆ ಮುಂತಾದ ಸೌಲಭ್ಯಗಳ ನಿರ್ಮಾಣ | 2016-17 ಬಂಡವಾಳ ವೆಚ್ಚಗಳು | 192.92 | ಕೆಆರ್ ಐಡಿಎಲ್ | 160.00 | 32.92 | 32.92 | 0.00 | ವಾಚ್ ಟವರ್ ಮತ್ತು ಇಂಟರ್ ಲಾಕ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ |
| 11 | ಕೊಡಗು ಜಿಲ್ಲೆಯ ದುಬಾರೆ ಬಳಿ ಕಾವೇರಿ ನದಿ ತೀರದ ಬಳಿ ಪಾರ್ಕಿಂಗ್ ಸೌಲಭ್ಯ ಅಭಿವೃದ್ಧಿ | 2016-17 ಬಂಡವಾಳ ವೆಚ್ಚಗಳು | 102.00 | ಲೋ.ಇ | 76.50 | 25.50 | 25.50 | 0.00 | ಪೂರ್ಣಗೊಂಡಿದೆ |
| 12 | ಸೋಮವಾರಪೇಟೆ ತಾಲ್ಲೂಕು ಶನಿವಾರಸಂತೆ ಹೋಬಳಿ ತಪೋವನ ಮನೆಹಳ್ಳಿ ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನದಿಂದ ಅಜ್ಜಯ್ಯ ವೀರಭದ್ರ ಮಠಕ್ಕೆ ಹೋಗುವ ರಸ್ತೆ ಅಭಿವೃದ್ಧಿ | 2019-20 ಬಂಡವಾಳ ವೆಚ್ಚಗಳು | 100.00 | ಲೋ.ಇ | 100.00 | 0.00 | 0.00 | 0.00 | ಪ್ರಗತಿಯಲ್ಲಿದೆ |
| 13 | ಕುಶಾಲನಗರದ ದುಬಾರೆಯಲ್ಲಿ ಪಾರ್ಕಿಂಗ್ ವ್ಯವಸ್ಥೆ ನಿರ್ಮಾಣ (ಭಾಗ-2). | 2019-20 | 130.00 | ಲೋ.ಇ | 103.00 | 27.00 | 27.00 | 0.00 | ಪ್ರಗತಿಯಲ್ಲಿದೆ |
| | **ಒಟ್ಟು** | | **2406.09** | | **2029.20** | **376.89** | **376.89** | **0.00** | |